# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ | : 242 |
| ಮಾನ್ಯ ಸದಸ್ಯರ ಹೆಸರು | : ಶ್ರೀ ಮಂಜುನಾಥ್ ಭಂಡಾರಿ |
| ಉತ್ತರಿಸಬೇಕಾದ ದಿನಾಂಕ | : 06-03-2025 |
| ಉತ್ತರಿಸಬೇಕಾದವರು | : ಮಾನ್ಯಮುಖ್ಯಮಂತ್ರಿಯವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕದಲ್ಲಿ ಏಕೀಕರಣದ ನಂತರ ಇಲ್ಲಿಯವರೆಗೆ ಎಷ್ಟು ಪರಿಶಿಷ್ಟ ಸಮುದಾಯಗಳ ಹೆಸರನ್ನು ಕೇಂದ್ರ ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರಿಸಲು ಅಥವಾ ಪಟ್ಟಿಯಿಂದ ತೆಗೆಯಲು ಶಿಫಾರಸ್ಸು ಮಾಡಲಾಗಿದೆ: ಹೀಗೆ ಶಿಫಾರಸ್ಸು ಮಾಡಲು ಪರಿಗಣಿಸಿದ ಮಾನದಂಡಗಳು ಯಾವುವು: ಕೇಂದ್ರ ಸರಕಾರಕ್ಕೆ ಶಿಫಾರಸ್ಸು ಮಾಡಲು ರಾಜ್ಯಕ್ಕೆ ಅವಕಾಶವಿರುವ ನಿಯಮಗಳು ಯಾವುವು : | ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಿಂದ 16 ಪರಿಶಿಷ್ಟ ಪಂಗಡಗಳ ಸಮುದಾಯಗಳ ಹೆಸರನ್ನು ಪಟ್ಟಿಗೆ ಸೇರಿಸಲು ಶಿಫಾರಸ್ಸು ಮಾಡಲಾಗಿದೆ.<br><br>ಮುಂದುವರೆದು, ಭಾರತ ಸಂವಿಧಾನ ಅನುಚ್ಛೇಧ ಪರಿಶಿಷ್ಟ ಪಂಗಡದ ಪಟ್ಟಿಗೆ 342ರನ್ವಯ ಯಾವುದೇ ಜಾತಿಯನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರ್ಪಡೆ/ತೆಗೆದು ಹಾಕುವ ಇನ್ಯಾವುದೇ ಮಾರ್ಪಾಡು ಮಾಡುವ ಪರಮೋಚ್ಛ ಅಧಿಕಾರವು ಕೇಂದ್ರ ಸರ್ಕಾರಕ್ಕೆ ಮಾತ್ರ ಇರುತ್ತದೆ. ಅದರನ್ವಯ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ರಾಜ್ಯ ಸರ್ಕಾರಕ್ಕೆ ಅವಕಾಶವಿರುತ್ತದೆ.<br><br>ಯಾವುದೇ ಒಂದು ಸಮುದಾಯವನ್ನು ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರಿಸಲು THE REPORT OF THE ADVISORY COMMITTEE ON THE REVISION OF THE LISTS OF SCHEDULED CASTS AND SCHEDULED TRIBES – 1965 (THE LOKUR COMMITTEE REPORT) ಸಮಿತಿ ವರದಿ ಪ್ರಕಾರ ಕೆಳಕಂಡ ಲಕ್ಷಣಗಳನ್ನು ಹೊಂದಿರಬೇಕಾಗಿರುತ್ತದೆ<br><br>1) ಪ್ರಾಚೀನ ಗುಣಲಕ್ಷಣಗಳನ್ನು ಹೊಂದಿರಬೇಕು (INDICATION OF PRIMITIVE TRAITS)<br>2) ವಿಶಿಷ್ಟ ಸಂಸ್ಕೃತಿ (DISTINCTIVE CULTURE)<br>3)ಭೌಗೋಳಿಕ ಪ್ರತ್ಯೇಕವಾಗಿರಬೇಕು. (GEOGRAPHICAL ISOLATION)<br>4) ದೊಡ್ಡ ಸಮುದಾಯದವರೊಂದಿಗೆ ಬೆರೆಯಲು ಸಂಕೋಚ ಹೊಂದಿರುವುದು (SHYNESS OF CONTACT WITH THE COMMUNITY AT LARGE).<br>5) ಹಿಂದುಳಿದಿರುವಿಕೆ (BACKWARDNESS)<br>ಯಾವುದೇ ಸಮುದಾಯ ಮೇಲಿನ ಗುಣಲಕ್ಷಣಗಳನ್ನು ಹೊಂದಿದೆಯೇ ಅಥವಾ ಇಲ್ಲವೇ ಎಂಬುದನ್ನು ಮಾನವಶಾಸ್ತ್ರಜ್ಞ ಮೂಲ ಕುಲಶಾಸ್ತ್ರೀಯ ಅಧ್ಯಯನ ಕೈಗೊಂಡು ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ. ಅಧ್ಯಯನಕ್ಕೊಳಪಟ್ಟ ಸಮುದಾಯ ಪರಿಶಿಷ್ಟ ಪಂಗಡಗಳ ಗುಣಲಕ್ಷಣಗಳನ್ನು ಹೊಂದಿರುವುದಾಗಿ ಮಾನವ ಶಾಸ್ತ್ರಜ್ಞರು ಅಭಿಪ್ರಾಯಪಟ್ಟು ಪರಿಶಿಷ್ಟ ಪಂಗಡಕ್ಕೆ ಸೇರಿಸಬಹುದು ಎಂದು ಶಿಫಾರಸ್ಸು ಮಾಡಿದರೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು. |

| | | |
|---|---|---|
| ಆ) | ಪರಿಶಿಷ್ಟ ಸಮುದಾಯಗಳ ಹೆಸರನ್ನು ಕೇಂದ್ರ ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರಿಸಲು ಅಥವಾ ಪಟ್ಟಿಯಿಂದ ತೆಗೆಯುವ ಬಗ್ಗೆ ಎಷ್ಟು ಸಮುದಾಯಗಳ ಕುರಿತಂತೆ ಮೈಸೂರಿನ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ (ಟ್ರೈಬಲ್ ರಿಸರ್ಚ್ ಇನ್ಸ್ಟಿಟ್ಯೂಟ್) ಮೂಲಕ ಕುಲಶಾಸ್ತ್ರೀಯ ಸಂಶೋಧನೆ ನಡೆಸಿ ವರದಿಯನ್ನು ಸರ್ಕಾರ ಪಡೆದುಕೊಂಡಿದೆ: | 16 ಸಮುದಾಯಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಕುಲಶಾಸ್ತ್ರೀಯ ಅಧ್ಯಯನ ನಡೆಸಲಾಗಿದೆ. ಹೆಳವ ಪಿಚ್ಚಗುಂಟ್ಲು, ಗೌಳಿ/ಧನಗರ್/ಗೊಲ್ಲ, ಬೆಟ್ಟಕುರುಬ, ಹಾಲುಮತ (ಕೊಡಗು ಜಿಲ್ಲೆ), ಹಾಲಕ್ಕಿ ಒಕ್ಕಲು, ಪರಿವಾರ-ತಳವಾರ, ಗಂಗಾಮತ ಮತ್ತು ಅದರ ಪರ್ಯಾಯ ಪದಗಳು, ಮಲೇರು/ಮಾಲೇರು, ಚಪ್ಪರಬಂದ, ಕೊಡಗು ಜಿಲ್ಲೆಯ ಕೊಡವ, ಕುಡುಬಿ, ಕುರುಬ, ಕುರುಬ ಗೊಂಡ, ಕುಣಬಿ, ಕಾಡುಗೊಲ್ಲ, ಗೋಂದಲಿ/ಬುಡಬುಡಿಕೆ/ವಾಸುದೇವ ಸದರಿ ವರದಿಗಳು ವಿವಿಧ ಹಂತಗಳಲ್ಲಿ ಪರಿಶೀಲನೆಯಲ್ಲಿರುತ್ತದೆ. |
| ಇ) | ಹೀಗೆ ಸರ್ಕಾರ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಮೂಲಕ ಅಥವಾ ಇತರ ಸಂಸ್ಥೆಗಳಿಂದ ಸರಕಾರಕ್ಕೆ ಸಲ್ಲಿಸಲ್ಪಟ್ಟ ವರದಿಗಳಲ್ಲಿ ಎಷ್ಟು ವರದಿಗಳನ್ನು ಸರ್ಕಾರ ಒಪ್ಪಿಕೊಂಡಿದೆ ಮತ್ತು ತಿರಸ್ಕರಿಸಿದೆ: (ಈ ಕುರಿತಂತೆ ಇಲಾಖೆಯು ಕೈಗೊಂಡ ಕ್ರಮಗಳ ಮಾಹಿತಿ ನೀಡುವುದು). | ಯಾವುದೇ ಸಮುದಾಯಗಳನ್ನು ಕರ್ನಾಟಕದ ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರ್ಪಡೆ/ತೆಗೆದು ಹಾಕುವ/ಇನ್ನಾವುದೇ ಮಾರ್ಪಾಡು ಮಾಡುವ ಪರಮೋಚ್ಚ ಪ್ರಾಧಿಕಾರವು ಕೇಂದ್ರ ಸರ್ಕಾರಕ್ಕೆ ಮಾತ್ರ ಇರುತ್ತದೆ. ಅದರನ್ವಯ, ರಾಜ್ಯ ಸರ್ಕಾರದ ಈ ಕೆಳಕಂಡ ಪ್ರಸ್ತಾವನೆಗಳನ್ನು ಪುರಸ್ಕರಿಸಿ ಕರ್ನಾಟಕ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಸೇರ್ಪಡೆಗೊಳಿಸಿರುತ್ತದೆ.<br>1. ಧಾರವಾಡ, ಬೆಳಗಾವಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ವಾಸಿಸುತ್ತಿರುವ ಸಿದ್ದಿ ಜನಾಂಗವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಬಗ್ಗೆ.<br>2. ಪರಿವಾರ ಮತ್ತು ತಳವಾರ ಜಾತಿಗಳನ್ನು ಪರಿಶಿಷ್ಟ ಪಂಗಡದ ನಾಯಕ ಜನಾಂಗದ ಪರ್ಯಾಯ ಪದಗಳೆಂದು ಪರಿಗಣಿಸುವ ಬಗ್ಗೆ.<br>3. ಬೆಟ್ಟ ಕುರುಬ ಜಾತಿಯನ್ನು ಕರ್ನಾಟಕ ರಾಜ್ಯದ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿರುವ ಕಾಡುಕುರುಬ ಜಾತಿಯ ಸಮಾನಾಂತರವಾಗಿ ಸೇರಿಸುವ ಬಗ್ಗೆ. |
| ಈ) | ಕರ್ನಾಟಕ ರಾಜ್ಯದ ಕರಾವಳಿ ಭಾಗದ ಕುಡುಬಿ ಸಮುದಾಯದ ಬಗ್ಗೆ ಎರಡು ವಿಭಿನ್ನ ಕುಲಶಾಸ್ತ್ರೀಯ ಸಂಶೋಧನಾ ವರದಿಗಳಾದ ಪ್ರೋ. ಟಿ.ಟಿ ಬಸವನಗೌಡ (ಕವಿವಿ) ಮತ್ತು ಪ್ರೋ. ಮನೋಹರ್ ಯಾದವ್ ಇವರುಗಳಿಂದ (ಐಸೆಕ್) ಸರ್ಕಾರ ಸ್ವೀಕರಿಸಿದ್ದ ಸಂದರ್ಭಗಳಲ್ಲಿ ಯಾವ ವರದಿಯನ್ನು ಪರಿಗಣಿಸಿ ಯಾವ ಕ್ರಮವಹಿಸಲಾಗಿದೆ: | 1. ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ಪತ್ರ ಸಂಖ್ಯೆ: KU/PLG/DEV/JCK/ 2010-11/105/1154. ದಿನಾಂಕ: 04.05.2010 ರಲ್ಲಿ ಡಾ\|\| ಟಿ.ಟಿ ಬಸವನ ಗೌಡ, ಪ್ರಿನ್ಸಿಪಾಲ, ಇನ್‌ವೆಸ್ಟಿಗೇಟರ್, ಡಿ.ಡಿ.ಎಸ್.ಟಿ.ಜಿ.ಕೆ, ಪ್ರೊಜೆಕ್ಟ್, ಮಾನವ ಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರು ಕುಡುಬಿ ಜನಾಂಗದ ಕುಲಶಾಸ್ತ್ರೀಯ ಅಂತಿಮ ವರದಿಯು ಸ್ವೀಕೃತವಾಗಿದೆ.<br>2. ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಪತ್ರ ಸಂಖ್ಯೆ:ಟಿ.ಆರ್.ಐ/ಮೈ/ಸಂವಿ/ಸಿಆರ್-33/2014-15 ದಿನಾಂಕ:24.01.2021ರಲ್ಲಿ ಇನ್ಸ್ಟಿಟ್ಯೂಟ್ಸ್ ಫಾರ್ ಅಂಡ್ ಎಕನಾಮಿಕ್ ಚೇಂಜ್, ನಾಗರಭಾವಿ, ಬೆಂಗಳೂರು ಇವರ ಮೂಲಕ ಕೈಗೊಂಡಿದ್ದು, ಅವರು ಸಲ್ಲಿಸಿರುವ ಅಧ್ಯಯನದ ಅಂತಿಮ ವರದಿಯು ಸ್ವೀಕೃತವಾಗಿದೆ.<br>3. ಅದರಂತೆ ಕರ್ನಾಟಕ ರಾಜ್ಯದ ಕರಾವಳಿ ಭಾಗದ ಕುಡುಬಿ ಸಮುದಾಯವನ್ನು ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರಿಸುವ ಕುರಿತು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ. |

**STW/SECB/SAD/20/2025**

(ಸಿದ್ದರಾಮಯ್ಯ)

**ಮುಖ್ಯಮಂತ್ರಿ**